


## ಡ್ಯೂಡ್ ಪರ್ಫೆಕ್ಟ್

ಅಮೆರಿಕದ ಟೆಕ್ಸಾಸ್‌ನ ಕೊರಿ ಕಾಟನ್, ಕೋಬಿ ಕಾಟನ್, ಗ್ಯಾರೆಟ್ ಹಿಲ್‌ಬರ್ಟ್, ಕೋಡಿ ಜೋನ್ಸ್, ಟೇಲರ್ ಟೋನಿ ಎಂಬ ಐವರು ಗೆಳೆಯರು ಕೂಡಿ ಆರಂಭಿಸಿದ ಯೂಟ್ಯೂಬ್ ಚಾನೆಲ್ ‘ಡ್ಯೂಡ್ ಪರ್ಫೆಕ್ಟ್’. ಹೆಸರಿಗೆ ತಕ್ಕಂತೆ ಇವರು ಏನು ಮಾಡಿದರೂ ಪರ್ಫೆಕ್ಟ್ ಆಗಿ ಇರಬೇಕೆಂದು ಬಯಸುತ್ತಾರೆ.

‘ಡ್ಯೂಡ್ ಪರ್ಫೆಕ್ಟ್’ ಬಳಗ ಕ್ರೀಡೆಗಳಿಗೆ ಸಂಬಂಧಿಸಿದ ವಿಡಿಯೊಗಳನ್ನು ಹೆಚ್ಚಾಗಿ ಮಾಡುತ್ತಾರೆ. ಬ್ಯಾಸ್ಕೆಟ್‌ಬಾಲ್‌ನೊಂದಿಗೆ ಇವರು ಮಾಡಿದ ವಿನ್ಯಾಸಗಳು ಹಲವು ದಾಖಲೆಗಳನ್ನು ನಿರ್ಮಿಸಿವೆ. ಹೀಗಾಗಿಯೇ ಇವರು ಮಾಡುವ ಪ್ರತಿ ವಿಡಿಯೊ ಅಂದಾಜು ₹ 2 ಕೋಟಿ ಆದಾಯ ಗಳಿಸುತ್ತದೆ. ಇವರ ಚಾನೆಲ್ ಚಂದಾದಾರರ ಸಂಖ್ಯೆ 5 ಕೋಟಿ ದಾಟಿದೆ.

ಕೊಂಡಿ: bit.ly/34EefTL



## ಲೀಲೀ ಪಾನ್ಸ್

ಅಮೆರಿಕದ ನಟಿ, ಗಾಯಕಿ, ನೃತ್ಯಗಾರ್ತಿ ಲೀಲೀ ಮೊದಲಿಗೆ ಸೋಷಿಯಲ್ ನೆಟ್‌ವರ್ಕಿಂಗ್ ಸೈಟ್ ವೈನ್‌ನಲ್ಲಿ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಾ ಜನಪ್ರಿಯತೆ ಗಳಿಸಿದರು. ಆನಂತರ ಯೂಟ್ಯೂಬ್ ಚಾನೆಲ್ ಆರಂಭಿಸಿದರು. ಪ್ರಸ್ತುತ ಇವರು ನಟಿಸುವ ಹಾಸ್ಯಮಯ ವಿಡಿಯೊಗಳನ್ನು ಸುಮಾರು 1.6 ಕೋಟಿ ಚಂದಾದಾರರು ನೋಡುತ್ತಾರೆ. ಈಕೆ ಒಂದು ವಿಡಿಯೊ ಅಪ್‌ಲೋಡ್ ಮಾಡಿದರೂ ₹ 1 ಕೋಟಿಗೂ ಅಧಿಕ ಹಣ ಅವರ ಖಾತೆಗೆ ಜಮೆಯಾಗುತ್ತದೆ.

ಕೊಂಡಿ: bit.ly/2TxqMSr



## ದ ಆಡ್ ವನ್ಸ್ ಔಟ್

ಅಮೆರಿಕದ ಜೇಮ್ಸ್ ರ‍್ಯಾಲಿಸನ್ ತಮ್ಮ 14ನೇ ವಯಸ್ಸಿನಲ್ಲಿ ಯೂಟ್ಯೂಬ್ ಚಾನೆಲ್ ಆರಂಭಿಸಿದರು. ಮೊದಲಿಗೆ ತಮ್ಮ ಜೀವನದ ವಿಶೇಷಗಳನ್ನು ತಿಳಿಸುವಂತಹ ಆ್ಯನಿಮೇಟೆಡ್ ವಿಡಿಯೊಗಳನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುತ್ತಿದ್ದರು. ಇವಕ್ಕೆ ಜನಪ್ರಿಯತೆ ದೊರೆತ ನಂತರ ಹಾಸ್ಯಭರಿತ ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಆರಂಭಿಸಿದರು. ಇದಕ್ಕಾಗಿ ಕಥೆ ಬರೆಯುವುದು, ಕಾರ್ಟೂನ್ ಚಿತ್ರಗಳನ್ನು ಬಿಡಿಸುವುದು, ಆ್ಯನಿಮೇಟೆಡ್ ವಿಡಿಯೊಗಳನ್ನು ಮಾಡುವುದು... ಹೀಗೆ ಎಲ್ಲವನ್ನೂ ಒಬ್ಬರೇ ನಿಭಾಯಿಸುತ್ತಿದ್ದರು. ಇವರ ಚಾನೆಲ್ ಹೆಸರು ‘ದ ಆಡ್ ವನ್ಸ್ ಔಟ್’. ಈ ಚಾನೆಲ್‌ಗೆ 1.5 ಕೋಟಿ ಚಂದಾದಾರರಿದ್ದಾರೆ. ಜೇಮ್ಸ್‌ರ ಪ್ರತಿ ವಿಡಿಯೊಗೂ ಸುಮಾರು ₹ 1.26 ಕೋಟಿ ಗಳಿಕೆಯಿದೆ.

ಕೊಂಡಿ: bit.ly/3ozpXa9